ಇಷ್ಟೊಂದು ಖುಷಿಯಾಗಿದೀಯಾ... ಏನಾರ ಮಾಡ್ದೇನೋ...' ಎಂದು ಗುಟ್ಟು ತಿಳಿದುಕೊಳ್ಳುವನಂತೆ ಕೇಳಿದ. 'ನಂದು, ಮಂಜುಂದು, ಸಣ್ಣಮ್ಮುಂದು ಎಲ್ಲಾ ಕನ್‌ಫರ್ಮ್ ಆಯ್ತು... ನಿಂದೊಂದೇ ಉಳಿದಿರೋದು...' ಕಡ್ಡಿ ಸೀನ ನಗುತ್ತಾ ನುಡಿದಾಗ ನನ್ನೊಬ್ಬನನ್ನೇ ಬಿಟ್ಟು ಇವರೆಲ್ಲಾ ಏನೋ ಕರಾಮತ್ತು ಮಾಡಿದಾರೆ... ಕಳ್ಳ ನನ್ಮಕ್ಕಳು... ಎನಿಸಿ ಕೋಪ ಉಕ್ಕಿ ಬಂದರೂ ತೋರಿಸಿಕೊಳ್ಳಲಿಲ್ಲ. ಈಗೇನಿದ್ದರೂ ಕೆಲಸ ಉಳಿಸಿಕೊಳ್ಳುವ ತಂತ್ರವನ್ನು ತಿಳಿಯಲು ಉಳಿದಿರುವ ದಾರಿ ಎಂದುಕೊಂಡು 'ನೀವೆಲ್ಲಾ ಏನ್ಮಾಡಿದ್ರೋ ಸೀನ...' ಅಂತ ಮೆದುವಾಗಿ ಕೇಳಿದ. 'ಅದುನ್ನ ಅಂಗೆಲ್ಲಾ ಹೇಳಕ್ಕಾಗಲ್ಲ... ಸಾಯಂಕಾಲ ಒಂದು ಕ್ವಾಟ್ರು ಕೊಡಿಸಿದ್ರೆ ಹೇಳ್ತೀನಿ...' ಅಂದ ಸೀನನನ್ನು ಕಂಡು, 'ಹಿಡ್ಕಂಡು ಒದ್ದುಬಿಡ್ಬೇಕು ನನ್ಮಗನಿಗೆ...' ಎಂದು ಅನಿಸಿದರೂ 'ಅದೇನು ಹೇಳಲೇ ಸುಮ್ನೆ...' ಅಂತ ತುಸು ಆತಂಕದಿಂದಲೇ ಕೇಳಿದ. 'ಹೇಳುದ್ನಲ್ಲಾ... ಸಾಯಂಕಾಲ ಸಪ್ತಗಿರಿ ವೈನ್ ಸ್ಟೋರ್ ಹತ್ರ ಬಾ...' ಎಂದವನೇ ಮತ್ತೆ ಸಿಳ್ಳು ಹಾಕುತ್ತಾ ಜಾಗ ಖಾಲಿ ಮಾಡಿದ ಸೀನ. ಮಾದನಿಗೆ ಮೈಯ್ಯೆಲ್ಲಾ ಉರಿದುಹೋಯಿತು. ಒಂದು ಕ್ವಾಟ್ರು ಅಂದ್ರೆ ಈ ನನ್ಮಗನಿಗೆ ಐವತ್ತು ರೂಪಾಯಿ ಕಕ್ಕಬೇಕು... ಎಂದು ಯೋಚನೆಗೀಡಾದ ಮಾದನಿಗೆ ಏನ್ ಮಾಡೋದು ಹೊಟ್ಟೆಪಾಡಿನ ಪ್ರಶ್ನೆ... ದುಡ್ಡಿನ ಮಕ ನೋಡಬಾರದು... ಉಪಾಯವಾಗಿ ತಿಳಿದುಕೊಳ್ಳಬೇಕೆನಿಸಿತು.

ಸಂಜೆ ಸಪ್ತಗಿರಿ ವೈನ್ ಸ್ಟೋರಿನ ಬಳಿ ಹೇಳಿದ ಸಮಯಕ್ಕೆ ಹಾಜರಾದ ಸೀನನಿಗೆ ಒಂದು ಕ್ವಾಟ್ರು ಕೊಡಿಸಿ, 'ಏನ್ ಹೇಳಲೇ ಬೇಗ...' ಎಂದು ಚಡಪಡಿಸುತಿದ್ದ ಮಾದನನ್ನು ಕಂಡು ಸೀನ ನಕ್ಕು 'ಮೊದ್ಲು ಒಂದು ಕಟ್ಟು ಬೀಡಿ ತಕ್ಕಂಬಾ...' ಅಂದ. ಸಿಗಿದು ಬಿಡಬೇಕು ಈ ನನ್ಮಗನನ್ನ ಅಂತ ಸಿಟ್ಟು ಬಂದರೂ ತಾಳಿಕೊಂಡು ಬೀಡಿ ತಂದುಕೊಟ್ಟ. ಬೀಡಿಯನ್ನು ಬಾಯಿಗಿಟ್ಟುಕೊಂಡು ಹಚ್ಚಿದ ಕಡ್ಡಿ ಸೀನ ನಿಧಾನವಾಗಿ ಹೊಗೆ ಎಳೆದು ಆಚೆ ಬಿಟ್ಟ. ಮಾದ ಕಾತುರ ತಡೆಯಲಾಗದೇ, 'ಸಾಹೇಬ್ರಿಗೆ ಏನಾರ ದುಡ್ಡುಗಿಡ್ಡು ಕೊಡ್ಬೇಕೇನೋ...' ಅಂತ ಮೆಲ್ಲಗೆ ಕೇಳಿದ. 'ಸಾಹೇಬ್ರು ಇಂತ ಜುಜುಬಿ ಕೆಲಸಕ್ಕೆ ದುಡ್ಡು ತಗಳಾಕಿಲ್ಲ...' ಅಂದ ಸೀನನ ಮಾತಿನಿಂದ ದಿಗಿಲಾಗಿ ಮತ್ತೆ ಇನ್ನೇನು ಮಾಡ್ಬೇಕೋ ಎನ್ನುವಂತೆ ಸೀನನನ್ನೇ ದಿಟ್ಟಿಸಿ ನೋಡಿದ. ಸೀನ ರಹಸ್ಯವನ್ನು ಬಯಲು ಮಾಡುವಂತೆ, 'ಸಾಹೇಬ್ರು ಕ್ವಾಟ್ರಸ್‌ಲ್ಲಿ ಒಬ್ರೇ ಇದಾರೆ... ಅವ್ರ ಸಂಸಾರ ಬ್ಯಾರೆ ಊರಲ್ಲದೆ... ಅದುಕ್ಕೆ ರಾತ್ರಿ ಊಟುಕ್ಕೆ ಒಂದು ಒಳ್ಳೇ ಬಿರಿಯಾನಿ... ಒಂದು ಅರ್ಧ ಬಾಟ್ಲು ಎಣ್ಣೆ ಕೊಟ್ರೆ ಸಾಕು...' ಅಂದಾಗ, 'ಅಷ್ಟೇನಾ...' ಅನ್ನಿಸಿ ನಿರಾಳವಾಯಿತು. 'ಹೋಟ್ಲಲ್ಲಿ ಬಿರಿಯಾನಿ ತಕ್ಕಂಡು ಬತ್ತೀನಿ... ಬಾಟ್ಲು ಯಾವ್ದು?...' ಎಂದು ಪ್ರಶ್ನಿಸಿದ ಮಾದನನ್ನು ಕಂಡು ಸೀನ ಬಾಯಿಯಲ್ಲಿದ್ದ ಬೀಡಿಯ ಹೊಗೆಯನ್ನು ಹೊರಗೆ ಬಿಟ್ಟು ಎತ್ತಲೋ ನೋಡುತ್ತಾ, 'ಸಾಹೇಬ್ರಿಗೆ ಹೋಟ್ಲುದು ಆಗಲ್ಲ... ಮನೇದಾಗ್ಬೇಕು...' ಅಂದ. ಮಾದನಿಗೆ ಮತ್ತೆ ಆತಂಕ ಶುರುವಾಯಿತು. ಅವನ ಹೆಂಡತಿ ನಿಂಗಿಗೆ ಬಿರಿಯಾನಿ ಮಾಡಲು ಬರುತ್ತಿರಲಿಲ್ಲ. ಯಾವಾಗಲೋ ರಸ್ತೆ ಬದಿಯ ಟೈರು ಗಾಡಿಯಲ್ಲಿ ಬಿರಿಯಾನಿ ತಿಂದಿದ್ದು ಬಿಟ್ಟರೆ ಎಂದೂ ಅವನ ಮನೆಯಲ್ಲಿ ಬಿರಿಯಾನಿ ಮಾಡಿರಲಿಲ್ಲ.

ತಟ್ಟನೆ ಮಾದನಿಗೆ ನೆನಪಾದದ್ದು ತಮ್ಮ ಬೀದಿಯಲ್ಲಿಯೇ ಇದ್ದ ಫಾತಿಮಕ್ಕಳ ಮನೆಯಿಂದ ಆಗಾಗ ಬರುತಿದ್ದ 'ಘಮ್...' ಎನ್ನುವ ಬಿರಿಯಾನಿಯ ವಾಸನೆ. ಬಿರಿಯಾನಿ ಮಾಡಿಸುವ ಕೆಲಸವನ್ನು ತನ್ನ ಹೆಂಡತಿ ನಿಂಗಿಗೆ ವಹಿಸಿದರಾಯಿತೆಂಬ ಆಲೋಚನೆ ಬಂದು ಅವನ ಮನಸ್ಸಿಗೆ ಸಮಾಧಾನವಾಯಿತು.